ನಿಮ್ಮೊಡನೆ

# ಕನ್ನಡವನ್ನು ಉಳಿಸುವ ಬಗೆ

ಕನ್ನಡ ಶಾಲೆಗಳ ಬಗ್ಗೆ ಪೋಷಕರ ಅವಜ್ಞೆ ಹೆಚ್ಚಾಗುತ್ತಿದೆ. ಮೊಬೈಲ್‌ನಲ್ಲಿ ಕನ್ನಡ ಬಳಕೆಯ ಅವಕಾಶಗಳಿದ್ದರೂ ಹೆಚ್ಚಿನ ಕನ್ನಡಿಗರು ಇಂಗ್ಲಿಷಿಗೆ ಅಂಟಿಕೊಂಡಿದ್ದಾರೆ. ಕನ್ನಡದಲ್ಲಿ ಮಾತನಾಡುವಾಗಲೂ ಇಂಗ್ಲಿಷಿನ ಪದಬಳಕೆಗಳು ಹೆಚ್ಚಾಗುತ್ತಿವೆ. ಹೀಗಾದರೆ ಕನ್ನಡ ಉಳಿದು, ಬೆಳೆಯುವುದು ಹೇಗೆ?

ರಾಜ್ಯೋತ್ಸವ ಬಂದಾಗಲೆಲ್ಲ ಕನ್ನಡದ ಬಗ್ಗೆ ಒಂದಿಷ್ಟು ಚರ್ಚೆ, ಅನುಕಂಪ, ಅನುತಾಪ ಮಾಮೂಲಾಗಿದೆ. ಒಂದೆಡೆ ಕನ್ನಡ ಭುವನೇಶ್ವರಿಯ ಸಂಭ್ರಮದ ಮೆರವಣಿಗೆ, ಇನ್ನೊಂದೆಡೆ ಕನ್ನಡ ಶಾಲೆಗಳ ಕಣ್ಮರೆ– ಕಳೆದ ಕೆಲವು ವರ್ಷಗಳಿಂದ ಕಣ್ಣೆದುರೇ ನಡೆಯುತ್ತಿರುವ ವಿದ್ಯಮಾನ. ಈ ಸಂಭ್ರಮ, ಅಬ್ಬರ, ಅನುತಾಪದ ಮಧ್ಯೆ ಕನ್ನಡ ನಿಧಾನಕ್ಕೆ ಕಣ್ಮರೆಯಾಗುತ್ತಿದೆ. ಕನ್ನಡ ಶಾಲೆಗಳ ದುಸ್ಥಿತಿಯ ಬಗ್ಗೆ ಮಾತನಾಡುವುದೇ ಬೇಡ ಎನ್ನುವಂತಿದೆ ಪರಿಸ್ಥಿತಿ. ರಾಜಧಾನಿಯಲ್ಲಿ ಮಾತ್ರವಲ್ಲ, ಇತ್ತೀಚೆಗೆ ಜಿಲ್ಲಾ ಕೇಂದ್ರಗಳಲ್ಲೂ ಕನ್ನಡ ಶಾಲೆಗಳಲ್ಲಿ ವಿದ್ಯಾರ್ಥಿಗಳ ಸಂಖ್ಯೆ ಕ್ಷೀಣಿಸುತ್ತಿದೆ. ಪೋಷಕರೇ ಕನ್ನಡ ಶಾಲೆಗಳ ಬಗ್ಗೆ ಅಸಡ್ಡೆ ತೋರಿದರೆ, ಸರ್ಕಾರ ಪ್ರೀತಿ ತೋರುವುದು ದೂರವೇ ಉಳಿಯಿತು.

ಆಳುವವರಿಗೆ ಮತ್ತು ಬಹುತೇಕ ರಾಜಕಾರಣಿಗಳಿಗೆ ಇಂಗ್ಲಿಷ್ ಶಾಲೆಗಳ ಪ್ರಾಬಲ್ಯವನ್ನು ಮುರಿಯಲು ಮನಸ್ಸಿಲ್ಲ. ಅದಕ್ಕೆ ಅವರದ್ದೇ ಆದ ಕಾರಣಗಳಿವೆ. ಕನ್ನಡ ಶಾಲೆಗಳು ಇರುವುದು ಕೇವಲ ಬಡವರು ಮತ್ತು ಆರ್ಥಿಕ ಅಸಹಾಯಕರಿಗೆ ಮಾತ್ರ ಎನ್ನುವುದು ವಾಸ್ತವ. ಕೆಳಮಧ್ಯಮ ವರ್ಗದ ಜನರೂ ಹೊಟ್ಟೆಬಟ್ಟೆ ಕಟ್ಟಿ ದುಬಾರಿ ಶುಲ್ಕ ಕೊಟ್ಟು ಇಂಗ್ಲಿಷ್ ಮಾಧ್ಯಮದ ಶಾಲೆಗಳಿಗೇ ಮಕ್ಕಳನ್ನು ಸೇರಿಸುತ್ತಿದ್ದಾರೆ. ಅವರಿಗೆ ಉಳ್ಳವರನ್ನು ಅನುಕರಿಸುವ ಸಹಜ ವಾಂಛಲ್ಯ. ಮನೆಯಲ್ಲಿ ಅಚ್ಚ ಕನ್ನಡವನ್ನೇ ಬಳಸುವ ಕನ್ನಡಿಗರು ಕೂಡಾ, ಶಾಲೆಗಳ ಪ್ರಶ್ನೆ ಬಂದಾಗ ಕನ್ನಡ ಮಾಧ್ಯಮದ ಶಾಲೆಗಳನ್ನು ಮೂಸಿ ನೋಡುವುದಿಲ್ಲ. ಇದಕ್ಕೆ ಕಾರಣ ಬಹುತೇಕ ಕನ್ನಡ ಶಾಲೆಗಳು ಮೂಲಸೌಕರ್ಯಗಳಿಲ್ಲದೆ ನರಳುವುದು. ಇಂಗ್ಲಿಷ್ ಶಾಲೆಗಳಿಗೆ ಹೋಲಿಸಿದರೆ ಅತ್ಯುತ್ತಮ ಶಿಕ್ಷಕ ವರ್ಗ ಇರುವುದು ಕನ್ನಡ ಶಾಲೆಗಳಲ್ಲೇ. ಆದರೆ ಶಿಕ್ಷಕ ವರ್ಗದ ಆ ನೈಪುಣ್ಯತೆಯ ಬಗ್ಗೆ ಪೋಷಕರಿಗೆ ಅಸಡ್ಡೆ. ಇನ್ನು ಕೆಲವು ವರ್ಷಗಳಲ್ಲಿ ಕನ್ನಡ ಶಾಲೆಗಳು ಸಂಪೂರ್ಣವಾಗಿ ಇಲ್ಲವಾಗುವ ಮುನ್ಸೂಚನೆ ಈಗಲೇ ಎದ್ದು ಕಾಣಿಸುತ್ತಿದೆ.

ಕನ್ನಡವನ್ನು ಉಳಿಸಿ, ಬೆಳೆಸಲು ಮುಖ್ಯವಾಗಿ ಇರುವ ದಾರಿ ಕನ್ನಡ ಶಾಲೆಗಳ ರಕ್ಷಣೆ ಮತ್ತು ಪೋಷಣೆ ಎನ್ನುವುದು ನಿಸ್ಸಂಶಯ. ಸರ್ಕಾರವೇ ಮುಂದೆ ನಿಂತು ಕನ್ನಡ ಮಾಧ್ಯಮದ ಶಾಲೆಗಳಿಗೆ ಅತ್ಯಧಿಕ ಸಂಪನ್ಮೂಲವನ್ನು ಒದಗಿಸಿ, ಇಂಗ್ಲಿಷ್ ಶಾಲೆಗಳಿಗೆ ಸವಾಲೊಡ್ಡುವಂತೆ ಬೆಳೆಸದಿದ್ದಲ್ಲಿ ಈ ಸಮಸ್ಯೆಗೆ ಪರಿಹಾರ ಸಾಧ್ಯವಿಲ್ಲ. ಕನ್ನಡ ಶಾಲೆಗಳಲ್ಲಿ ಒಂದನೇ ತರಗತಿಯಿಂದಲೇ ಇಂಗ್ಲಿಷನ್ನು ಒಂದು ಭಾಷೆಯಾಗಿ ಕಲಿಸಲು ಅತ್ಯುತ್ತಮ ಶಿಕ್ಷಕರನ್ನು ನೇಮಕ ಮಾಡಿಕೊಳ್ಳುವುದು ಈ ನಿಟ್ಟಿನಲ್ಲಿ ಆಗಬೇಕಾದ ಕೆಲಸ.

ಕನ್ನಡವನ್ನು ಉಳಿಸಿ, ಬೆಳೆಸುವುದಕ್ಕೆ ಇನ್ನೂ ಹಲವು ಸುಲಭ ದಾರಿಗಳಿವೆ. ಅವುಗಳಲ್ಲಿ ಒಂದು, ಮೊಬೈಲ್‌ನಲ್ಲಿ ಕನ್ನಡ ಬಳಕೆಯನ್ನು ಜನಪ್ರಿಯಗೊಳಿಸುವುದು. ಇವತ್ತು ಮೊಬೈಲ್ ಬಳಕೆದಾರರ ಸಂಖ್ಯೆ ಒಂದೇ ಸಮನೆ ಏರುತ್ತಿದೆ. ಮೊಬೈಲ್ ಬಳಕೆಯಲ್ಲಿ ಕರ್ನಾಟಕವು ದೇಶದಲ್ಲೇ ಆರನೇ ಸ್ಥಾನದಲ್ಲಿದ್ದು ಸುಮಾರು ಐದೂವರೆ ಕೋಟಿ ಜನರು ಮೊಬೈಲ್ ಬಳಸುತ್ತಿದ್ದಾರೆ. ಇವರಲ್ಲಿ ಬಹುತೇಕರು ಇವತ್ತಿಗೂ ಮೊಬೈಲ್‌ನಲ್ಲಿ ಕನ್ನಡದ ಲಿಪಿ ಬಳಕೆಗೆ ಒಗ್ಗಿಕೊಂಡಿಲ್ಲ. ಮೊಬೈಲ್ ಮೂಲಕ ಅಂತರ್ಜಾಲ ಬಳಕೆಯೂ ವೇಗವಾಗಿ ಹೆಚ್ಚುತ್ತಿದೆ. ಅಲ್ಲೂ ಕನ್ನಡ ಬಳಕೆದಾರರ ಸಂಖ್ಯೆ ನಿರಾಶಾದಾಯಕವಾಗಿದೆ. ಹಲವು ಮೊಬೈಲ್ ಕಂಪೆನಿಗಳು ಕನ್ನಡ ಲಿಪಿ ಬಳಕೆಯ ಸೌಲಭ್ಯವನ್ನು ಒದಗಿಸುತ್ತಿದ್ದರೂ, ಕನ್ನಡಿಗರ ಉದಾಸೀನ ಧೋರಣೆ ಮುಂದುವರಿದೇ ಇದೆ. ‘ಕನ್ನಡದಲ್ಲಿ ಟೈಪ್ ಮಾಡುವುದು ಕಷ್ಟ ಕಣ್ರೀ’ ಎನ್ನುವ ಸಬೂಬು ಬಹುತೇಕರದ್ದು. ಮನಸ್ಸು ಮಾಡಿದಲ್ಲಿ ಯಾವ ಭಾಷೆಯ ಟೈಪಿಂಗ್ ಕೂಡಾ ಕಷ್ಟವಲ್ಲ ಎನ್ನುವುದನ್ನು ಕನ್ನಡಿಗರು ಅರಿತುಕೊಳ್ಳುವುದು ಯಾವಾಗ?

ಕನ್ನಡ ಭಾಷೆಯಲ್ಲಿ ಇಂಗ್ಲಿಷ್ ಶಬ್ದಗಳ ಬಳಕೆಯಂತೂ ಇತ್ತೀಚೆಗೆ ವಿಪರೀತವಾಗಿದೆ. ಇಂಗ್ಲಿಷಿನ ಶಬ್ದಗಳನ್ನು ಬಳಸಲೇಬಾರದು ಎನ್ನುವ ಮಡಿವಂತಿಕೆಯ ಪ್ರಶ್ನೆ ಇದಲ್ಲ. ತೀರಾ ಅನಿವಾರ್ಯವಾದಾಗ ಮತ್ತು ಹೆಚ್ಚು ಜನಪ್ರಿಯ ಶಬ್ದಗಳಿದ್ದಾಗ ಇಂಗ್ಲಿಷ್ ಬಳಸಿದರೆ ತೊಂದರೆಯಿಲ್ಲ. ಆದರೆ ಅಚ್ಚಕನ್ನಡದ ಅತ್ಯುತ್ತಮ ಶಬ್ದಗಳಿದ್ದಾಗಲೂ, ಇಂಗ್ಲಿಷ್ ಪದಗಳನ್ನು ತೂರಿಸಿ ಭಾಷೆಯ ಅಂದ ಕೆಡಿಸುವುದು ಎಳ್ಳಷ್ಟೂ ಸರಿಯಲ್ಲ. ಕನ್ನಡಿಗರೇ ಕನ್ನಡಕ್ಕೆ ಶತ್ರುಗಳಾದರೆ, ಭಾಷೆಯನ್ನು ಉಳಿಸುವವರು ಯಾರು?

■ ಬಿ.ಎಂ.ಹನೀಫ್



ಹಳೇಮನಿ